**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ ನಾಗರಾಜು ಇವರ ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:**

**ಸೂಚನೆ : ಬೆಳಗಾವಿ ಸರ್ಕಾರಿ ಆಸ್ಪತ್ರೆ ಈಗ ವೃದ್ಧಾಶ್ರಮವಾಗುತ್ತಿದ್ದು, ಅಸ್ವಸ್ಥ ಪೋಷಕರನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿ ಮಕ್ಕಳು ಪರಾರಿಯಾಗುತ್ತಿರುವುದು, ಪೋಷಕರು ಚೇತರಿಸಿಕೊಂಡರೂ ಮನೆಗೆ ಕರೆದೊಯ್ಯುತ್ತಿಲ್ಲ ಹಾಗೂ 2 ವರ್ಷದಲ್ಲಿ ಬರೋಬ್ಬರಿ 152 ವೃದ್ಧರಿಗೆ ಈ ಆಸ್ಪತ್ರೆಯು ಆಶ್ರಯ ತಾಣವಾಗಿದ್ದು, ಮಕ್ಕಳಿಗೆ ಬೇಡವಾದ ಹೆತ್ತವರನ್ನು ಬಿಮ್ಸ್‌ನಲ್ಲಿಯೇ ಆರೈಕೆ ಮಾಡುತ್ತಿರುವ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು ಕುರಿತು .**

**ಉತ್ತರ:-**

ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆಯಲ್ಲಿ ಕಳೆದ 2 ವರ್ಷಗಳಲ್ಲಿ ದಾಖಲಾದ ನಿರ್ಗತಿಕ ವಯೋವೃದ್ಧ ರೋಗಿಗಳ ಪೈಕಿ 152 ವಯೋವೃದ್ಧ ರೋಗಿಗಳು ಈ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿರುತ್ತಾರೆ.

90 ರೋಗಿಗಳನ್ನು (ಕರ್ನಾಟಕದಿಂದ 73 ಮತ್ತು ಹೊರ ರಾಜ್ಯಗಳಿಂದ 17) ತಮ್ಮ ತಮ್ಮ ಮನೆಗಳಿಗೆ ಮರಳಿಸಲಾಗಿದೆ. ಉಳಿದ 62 ವಯೋವೃದ್ಧರನ್ನು ಜಿಲ್ಲಾಡಳಿತ ಸಹಾಯದಿಂದ ವಿವಿಧ ವೃದ್ಧಾಶ್ರಮಗಳಿಗೆ ಕಳುಹಿಸಲಾಗಿದೆ. ಇದರಲ್ಲಿ ಕೆಲವು ವಯೋವೃದ್ಧರಿಗೆ ಮಕ್ಕಳು ಹಾಗೂ ಸಂಬಂಧಿಕರು ಇದ್ದರೂ ಸಹ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.

ಪ್ರಸ್ತುತ 18 ವಯೋವೃದ್ಧ ರೋಗಿಗಳು ಗುಣಮುಖರಾಗಿದ್ದರೂ ಡಿಸ್ಚಾರ್ಜ್ ಹೊಂದದೇ ಆಸ್ಪತ್ರೆಯಲ್ಲಿ ಇರುತ್ತಾರೆ. ಇವರ ಸಂಬಂಧಿಕರನ್ನು ಹುಡುಕುವ ಹಾಗೂ ವಾರಸುದಾರರಿಗೆ ಹಸ್ತಾಂತರಿಸುವ ಕುರಿತು ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸುವ ಬಗ್ಗೆ ಯೋಜಿಸಿದ್ದು, ಈ ಕಾರ್ಯ ಚಾಲ್ತಿಯಲ್ಲಿದೆ.

**ಸಂಖ್ಯೆ:** ಎಂಇಡಿ 135 ಎಂಎಂಸಿ 2025

**(ಡಾ. ಶರಣಪ್ರಕಾಶ ಆರ್.ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು